## 22

# ಸಭೆಯಲ್ಲಿ ಒಬ್ಬ ಮಹಿಳೆಯ ಪಾತ್ರ

ಬೈಬಲಿನ ಪ್ರಕಾರವಾಗಿ ಮಾತಾಡುವದಾದರೆ, ಮಹಿಳೆಯರು ಬಹಳ ದೂರ ಬಂದಿದ್ದಾರೆ. ಹಳೇ ಒಡಂಬಡಿಕೆಯಲ್ಲಿ, ಮಹಿಳೆಯು ಒಂದು ವಿಶೇಷ ಸೃಷ್ಟಿಯಾಗಿದ್ದಾಳೆ. ಏಡೆನ್ ತೋಟ ದಲ್ಲಿ ಪಾಪ ಮಾಡಿದ ನಂತರ, ಮಹಿಳೆಯು ತಾನು ತನ್ನ ಗಂಡನಿಗೆ ಅಧೀನಳಾಗಿರಬೇಕು ಎಂದು ಹೇಳಲ್ಪಟ್ಟಳು. ದೇವರ ವ್ಯವಸ್ಥೆಯಲ್ಲಿ ಇನ್ನೂ ಮಹಿಳೆಯರು ಗೌರವಿಸಲ್ಪಟ್ಟರು. ಪುರುಷನು, ದೇವರಲ್ಲ, ಬಹುಪತ್ನಿತ್ವ ಪ್ರತಿಯೊಂದು ಕಾರಣಕ್ಕಾಗಿ ವಿವಾಹ ವಿಚ್ಛೇದನ ಮತ್ತು ಇಂಥವುಗಳನ್ನು ಪರಿಚಯಿಸಿದ್ದರಿಂದ ಮಹಿಳೆ ಯರನ್ನು ಅವನತಿಗಿಳಿಸಿದನು.

ನಾವು ಹೊಸ ಒಡಂಬಡಿಕೆಗೆ ಬರುವಾಗ, ಮಹಿಳೆಯರಿಗಾಗಿ ಗೌರವದ ದೇವರ ಸ್ಥಾನವು ಯೇಸುವಿನಿಂದ ಪುನಃ ಸ್ಥಾಪಿಸಿದ್ದನ್ನು ನಾವು ನೋಡುತ್ತೇವೆ. (ವಿಶೇಷ ವಾಗಿ ಲೂಕನ ಪುಸ್ತಕವನ್ನು ಮತ್ತು ಮಹಿಳೆಯರಿಗಾಗಿ ಗೌರವವು ತೋರಿಸಲ್ಪಟ್ಟಿದ್ದನ್ನು ಗಮನಿಸಿರಿ.) ಯೇಸುವು ಶಿಲುಬೆಯ ಮೇಲೆ ಎಲ್ಲರಿಗೋಸ್ಕರ ಮರಣ ಹೊಂದಿದನು. ಆತನ ಮರಣವು ಮಹಿಳೆಯರನ್ನು ಗೌರವದ ಸ್ಥಾನಕ್ಕೆ ಪುನಃ ಸ್ಥಾಪಿಸುವ ವಿಧಾನವನ್ನು ಪೂರ್ತಿಗೊಳಿಸಿದನು. ಶಿಲುಬೆಯ ಅಡಿಯಲ್ಲಿ ನೆಲವು ಸಮಾನವಾಗಿತ್ತು (ಗಲಾತ್ಯ 3:26-28).

ಆದಿ ಸಭೆಯಲ್ಲಿ ಮಹಿಳೆಯರ ಕಾರ್ಯದ ಕೆಲವು ಉದಾಹರಣೆಗಳು ಇಲ್ಲಿರುತ್ತವೆ: ಪುರುಷರೊಂದಿಗೆ ಮಹಿಳೆಯರೂ ಹಿಂಸಿಸಲ್ಪಟ್ಟರು ಮತ್ತು ಸುವಾರ್ತಾಪ್ರಸಾರಣೆಯಲ್ಲಿ ಸಹಾಯ ಮಾಡಿದರು (ಅಪೊಸ್ತಲರ ಕೃತ್ಯಗಳು 8:3). ಪ್ರಿಸ್ಕಿಲ್ಲಳೂ ಸತ್ಯದ ಪೂರ್ಣಜ್ಞಾನಕ್ಕೆ ಅಪೊಲ್ಲೊಸನನ್ನು ನಡಿಸುವಲ್ಲಿ ಸಹಾಯ ಮಾಡಿದಳು (ಅಪೊಸ್ತಲರ ಕೃತ್ಯಗಳು 18). ಫಿಲಿಪ್ಪನ ನಾಲ್ಕು ಜನ ಹೆಣ್ಣು ಮಕ್ಕಳಿಗೆ ಪ್ರವಾದನೆಯ ವರವಿತ್ತು (ಅಪೊಸ್ತಲರ ಕೃತ್ಯಗಳು 21:9). ರೋಮಾಪುರ 16ರಲ್ಲಿ ಸಭೆಯಲ್ಲಿ ಸೇವಕಿಯರಾಗಿದ್ದ ಅನೇಕ ಮಹಿಳೆಯರ ಬಗ್ಗೆ ಹೇಳಲಾಗಿದೆ, ಅವರಲ್ಲಿ ಫೊಯಿಬೆಯ ಸಭೆಯ ಒಬ್ಬ ಸೇವಕಿಯಾಗಿದ್ದಳು ಹಾಗೂ ಪೌಲನ ಕಾರ್ಯದಲ್ಲಿ ಸಹಾಯಕಳಾಗಿದ್ದಳು (ರೋಮಾಪುರ 16:1, 2). ಕ್ರೈಸ್ತ ಮಹಿಳೆಯರು ಪುರುಷರಂತೆಯೇ ಕೆಲವು ಅದ್ಭುತಮಾಡುವ ವರಗಳನ್ನು ಹೊಂದಿದ್ದರು. (ನೋಡಿರಿ. 1 ಕೊರಿಂಥ 12-14; ಗಮನಿಸಿರಿ. 1 ಕೊರಿಂಥ 11:5.) ಯುವೊದ್ಯಳು ಮತ್ತು ಸಂತುಕೆಯು ಸುವಾರ್ತೆಯಲ್ಲಿ ಪೌಲನೊಂದಿಗೆ ಜೊತೆಯಾಗಿ ಸೇವೆ ಮಾಡಿದರು (ಫಿಲಿಪ್ಪಿ 4:2, 3).

ಹೀಗಿದ್ದರೂ, ಇದರಲ್ಲಿ ಯಾವುದೂ, ಆದಿಕಾಂಡ 3ರಲ್ಲಿ ದೇವರಿಂದ ಕೊಡಲ್ಪಟ್ಟ ಮೂಲ ನಿಯಮವು ಪುರುಷರು ಮುಂದಾಳಾಗಿರಬೇಕು. ಎಂಬುದು ಬದಲಾಗಲಿಲ್ಲ: ಪತಿ ಪತ್ನಿಯರ ಸಂಬಂಧದಲ್ಲಿ, *ಪುರುಷನು* ಶಿರಸ್ಸಾಗಿರುವನು (ಎಫೆಸ 5:22-24, 33; 1 ಪೇತ್ರ 3:1, 5). ಪುರುಷರು ಸಭೆಯಲ್ಲಿ ನಾಯಕರಾಗಿರಬೇಕು, ಆತ್ಮನಿಂದ ಕೊಡಲ್ಪಟ್ಟ ಅರ್ಹತೆಗಳು ಸಭಾ ಹಿರಿಯನ ಮುಖ್ಯ ಸ್ಥಾನದಿಂದ ಸ್ತ್ರೀಯರನ್ನು ಹೊರಗೆ ಹಾಕುತ್ತದೆ ("ಒಬ್ಬ ಹೆಂಡತಿಯ ಗಂಡ"). ಪುರುಷರು ಆರಾಧನೆಯಲ್ಲಿ ನಾಯಕತ್ವವನ್ನು ಒದಗಿಸಬೇಕು (1 ಕೊರಿಂಥ 14; 1 ತಿಮೊಥೆ 2).

ಇಂದು ಕೆಲವು ಮಹಿಳೆಯರು ದೇವರು ಬಯಸುವದಕ್ಕಿಂತ ಹೆಚ್ಚು ದೂರ ಬಂದಿದ್ದಾರೆ (2 ಯೋಹಾನ 9). ಅನೇಕ ಸಭಾ ಪಂಗಡಗಳಲ್ಲಿ ಮಹಿಳಾ ಪ್ರಸಂಗಿಗಳಿದ್ದಾರೆ. ನಾವು ಜಾಗರೂಕರಾಗಿರದಿದ್ದರೆ, ಈ ತಪ್ಪು ಸಭೆಯ ಮೇಲೆ ಪರಿಣಾಮ ಮಾಡಬಹುದು.

## ಆಲೋಚಿಸಲು ವಾಕ್ಯಭಾಗಗಳು

ಗಲಾತ್ಯ 3:26-28 ವಾಕ್ಯಭಾಗವು ಸಭೆಯಲ್ಲಿ ಮಹಿಳೆಯರಿಗೆ ನಾಯಕತ್ವದ ಪಾತ್ರಗಳು ಇರಬೇಕೆಂದು ಯೋಚಿಸುವವರಿಂದ ವಿಚಾರಿಸಲ್ಪಡುವ ಪ್ರಮುಖ ವಾಕ್ಯ ಭಾಗವಾಗಿದೆ. ಯೇಸುವಿನಲ್ಲಿ ಎಲ್ಲರೂ ಸಮಾನರಾಗಿದ್ದಾರೆಂದು ಈ ವಾಕ್ಯಭಾಗವು ಹೇಳುತ್ತದೆ. ಹೀಗಿದ್ದರೂ, ಇದು ಪತಿ ಪತ್ನಿಯರ ಸಂಬಂಧಗಳಂಥ ಮತ್ತು ತಂದೆತಾಯಿ/ ಮಗುವಿನ ಸಂಬಂಧಗಳಂಥ ದೇವರು ಕೊಟ್ಟ ಪಾತ್ರಗಳನ್ನು ಕುರಿತು ಇತರ ಬೈಬಲಿನ ಮೂಲ ಬೋಧನೆಗಳನ್ನು ರದ್ದು ಪಡಿಸುವದಿಲ್ಲ. ಉದಾಹರಣೆಯಾಗಿ, ಯೌವನ ಪ್ರಾಯದಲ್ಲಿ ನನ್ನ ಪ್ರತಿಯೊಂದು ಹೆಣ್ಣು ಮಗಳು ಸುವಾರ್ತೆಗೆ ವಿಧೇಯರಾದರು, ಇದರ ಅರ್ಥ ಈಗ ನಾವು ಯೇಸುವಿನಲ್ಲಿ ಸಮಾನರಾಗಿ ರುವದರಿಂದ ನಾವು ಇನ್ನೂ ಮುಂದೆ ವಿದೇಯರಾಗಬಾರದೆಂದಾಗುವುದೋ?

ವಿಚಾರಿಸಲ್ಪಡಬೇಕಾದ ಒಂದು ವಾಕ್ಯಭಾಗವು 1 ಕೊರಿಂಥ 14:34, 35: "ದೇವ ಜನರ ಎಲ್ಲಾ ಸಭೆಗಳ ಮರ್ಯಾದೆಯ ಪ್ರಕಾರ ಸ್ತ್ರೀಯರು ಸಭೆಯ ಕೂಟಗಳಲ್ಲಿ ಸುಮ್ಮನಿರಬೇಕು ಮಾತಾಡುವದಕ್ಕೆ ಅವರಿಗೆ ಅಪ್ಪಣೆಯಿಲ್ಲ." ಈ ವಚನದ ಹಿನ್ನೆಲೆಯು ಕೊರಿಂಥ ಸಭೆಯಲ್ಲಿ ಅದ್ಭುತಕಾರ್ಯದ ವರಗಳನ್ನು ಆರಾಧನೆಯ ಕೂಟದಲ್ಲಿ ದುರುಪಯೋಗ ಪಡಿಸಿದ್ದರಿಂದ ಗಲಿಬಿಲಿಗೆ ಕಾರಣವಾದದ್ದಾಗಿದೆ. ಸಮಸ್ಯೆಗೆ ಸಾಮಾನ್ಯವಾದ ಪರಿಹಾರವು ಇದಾಗಿತ್ತು: "ಆದರೆ ಎಲ್ಲವೂ ಮರ್ಯಾದೆಯಿಂದಲೂ ಕ್ರಮದಿಂದಲೂ ನಡೆಯಲಿ" (ವಚನಗಳು 40). ಇದನ್ನು ಸಾಧಿಸಲು ಪೌಲನು ಹಲವಾರು ನಿಯಮಗಳನ್ನು ಕೊಟ್ಟನು. ಆರನೆಯದು ಮಹಿಳೆ ಯರು ಮೌನವಾಗಿ ರುವುದಾಗಿತ್ತು.

40ನೆಯ ವಚನದ ಹಿನ್ನೆಲೆಯು ಸ್ಥಳಿಕ ಸಭೆಯದಾಗಿತ್ತು; ಸಭೆಯು ಆರಾಧನೆಗಾಗಿ ಒಂದು ಗೂಡಿ ಬರುತ್ತಿತ್ತು (ಗಮನಿಸಿರಿ ವಚನಗಳು 19, 23, 26, 28; "ಸಭೆ" [ಎಕ್ಲೇಸಿಯ] ಇಲ್ಲಿ ಅರ್ಥ "ಕೂಟ" ಎಕ್ಲೇಸಿಯದ ಪ್ರಾಥಮಿಕ ಅರ್ಥ). "ಮೌನವಾಗಿರಬೇಕು" ಎಂಬುದು ಗ್ರೀಕ್ ಪದ Siagoದಿಂದ ಭಾಷಾಂತರಿಸಲ್ಪಟ್ಟಿದೆ, ಅದರ ಅರ್ಥ ಪರಿಪೂರ್ಣ ಮೌನ.[1]

ಇನ್ನೊಂದು ಮಹತ್ವದ ವಾಕ್ಯಭಾಗವು 1 ತಿಮೊಥೆ 2:11-14, ಇದಕ್ಕೆ 1 ಕೊರಿಂಥ 14ರೊಂ ದಿಗೆ ಅನೇಕ ಸಮಾಂತರಗಳಿವೆ. ಸಾಮಾನ್ಯ ವಿಷಯವು ಆರಾಧನೆ, ವಿಷಯವಾಗಿ ಪ್ರಾರ್ಥನೆ (ವಚನಗಳು 1, 8). ಬೋಧನೆಯು ವಚನ 12ರಲ್ಲಿಯೂ ನಮೂದಿಸಲ್ಪಟ್ಟಿದೆ. ಪುರುಷರು ಯಾವುದೇ ಸ್ಥಳದಲ್ಲಿ ಪ್ರಾರ್ಥಿಸಲು ಶಕ್ತರು ಎಂಬುದರ ಮೇಲೆ ಒತ್ತು ಕೊಟ್ಟಿದ್ದು, ಮಹಿಳೆ ಯರು ಹಾಗೆ ಮಾಡಲಾರರು ಎಂದು ಸೂಚಿಸುವುದಾಗಿದೆ. (ಪ್ರತಿಯೊಂದು ಸ್ಥಳ ಎಂಬುದು 1 ಕೊರಿಂಥ 1:2ರಲ್ಲಿ ಕ್ರೈಸ್ತ "ಸ್ಥಳಗಳು" ಎಂಬುದನ್ನು ಉಲ್ಲೇಖಿಸಲು ಉಪಯೋಗಿಸಲ್ಪಟ್ಟಿದೆ.) 8ನೆಯ ವಚನದಲ್ಲಿ "ಪುರುಷರು" ಎಂಬ ಶಬ್ದವು "ಅನೇಕ" (ಇದು ಮಹಿಳೆಗೆ ವಿರುದ್ಧವಾಗಿ ಪುರುಷನಿಗೆ ಸಂಬಂಧಿಸುವಂತೆ) ಎಂಬುದು ಉಪಯೋಗಿಸಲ್ಪಟ್ಟಿದೆ ಆದರೆ "ಅಂತ್ರೊಫೊಸ್" (ಸಾಮಾನ್ಯವಾಗಿ ಮಾನವ ಕುಲಕ್ಕೆ ಸಂಬಂಧಿಸಿದ್ದು. ವಚನಗಳು 1, 4, 5ರಲ್ಲಿ ಉಪಯೋಗಿ ಸಲ್ಪಟ್ಟಿದ್ದು) ಎಂಬುದು ಉಪಯೋಗಿಸಲ್ಪಟ್ಟಿಲ್ಲ. ಸಾಮಾನ್ಯ ಹಿನ್ನೆಲೆಯು ಪುನಃ ಬಹಿರಂಗವಾ ದದ್ದಾಗಿದೆ, "ಪರಿಶುದ್ಧ ಕೈಗಳನ್ನು ಮೇಲಕ್ಕೆತ್ತುವುದು" ಪ್ರಾರ್ಥನಾ ನಾಯಕನು ದೇವರ ಕಡೆಗೆ ಕೈಗಳನ್ನೆತ್ತಿ ಸಭೆಯವರ ಮೇಲೆ ಆಶೀರ್ವಾದವನ್ನು ಹೇಳುವುದನ್ನು ಗಮನಕ್ಕೆ ತರುತ್ತದೆ, ಪುನಃ ಸ್ತ್ರೀಯರು ಮೌನದಿಂದಿರುವದರ ಅವಶ್ಯಕತೆಯ ಮೇಲೆ ಒತ್ತಿ ಹೇಳಲ್ಪಟ್ಟಿದೆ (ವಚನ 12). ಬೋಧಿಸಬಾರದು ಎಂಬುದಕ್ಕೆ ಪ್ರತಿಬಂಧವು ಇತರ ಕಡೆಗಳಲ್ಲಿಯ ಪೌಲನ ಸ್ವಂತ ಬೋಧನೆಗೆ ವಿರೋಧವಾಗಿರುವದಿಲ್ಲ: ಕೆಲವೊಂದು ಸಂದರ್ಭಗಳಲ್ಲಿ, ಸ್ತ್ರೀಯರು ಬೋಧಿಸ ಬೇಕಾಗಿತ್ತು (ತೀತ 2:3, 4, ಇತ್ಯಾದಿ).

ಹೀಗಿದ್ದರೂ 1 ತಿಮೋಥೆ 2 ವಾಕ್ಯಭಾಗವು 1 ಕೊರಿಂಥ 14ರಲ್ಲಿಯ ವಾಕ್ಯಭಾಗಕ್ಕಿಂತ ಹೆಚ್ಚು ಸಾಮಾನ್ಯವಾದದ್ದಾಗಿದೆ. ಹೆಚ್ಚಾಗಿ ಕೂಡಿಸಿದ ಒತ್ತಡವು ಮನೋಭಾವನೆಯ ಮೇಲೆ ಇಡಲ್ಪಟ್ಟಿದೆ. "ಮೌನವಾಗಿರಬೇಕು" ಎಂಬುದು ಈ ವಾಕ್ಯಭಾಗದಲ್ಲಿ 1 ಕೊರಿಂಥ

14ರಲ್ಲಿಯಕ್ಕಿಂತ ಭಿನ್ನವಾದ ಪದದಿಂದ ಭಾಷಾಂತರಿಸಲ್ಪಟ್ಟಿದೆ. ಇದು *hesuchia* ಎಂಬುದರಿಂದ ಭಾಷಾಂತರಿಸಲ್ಪಟ್ಟಿದೆ, ಇದು ಹೆಚ್ಚಾಗಿ ಮಾತನಾಡದಿರುವದಕ್ಕೆ ಸಂಬಂಧಿಸಿರುವದಿಲ್ಲ, ಒಂದು ಮನೋಭಾವನೆಗೆ, ಒಂದು ಆತ್ಮಕ್ಕೆ ಒಂದು ರಚನೆಗೆ ಸಂಬಂಧಿಸಿರುತ್ತದೆ. ಇದು "ಮೌನತೆ" ಇಲ್ಲವೇ "ಮೌನವಾಗಿ" ಎಂದು ಭಾಷಾಂತರಿಸಲ್ಪಡಬಹುದು. ಅದು (see NASB, NIV; see *hesuchia* in *Vine's Expository Dictionary of New Testament Words*). 1 ತಿಮೊಥೆ 2:2ರಲ್ಲಿ ನೆಮ್ಮದಿಯ ಮತ್ತು ಸಮಾಧಾನಕರವಾದ ಜೀವಿತವನ್ನು ವಿವರಿಸಲು ಮತ್ತು 2 ಥೆಸಲೊನೀಕ 3:12ರಲ್ಲಿ ಕ್ರೈಸ್ತರು ತಮ್ಮಷ್ಟಕ್ಕೆ ತಾವೇ ನಡೆಯುವಂತೆ ಒತ್ತಾಯಿಸುವದಕ್ಕಾಗಿ ಉಪಯೋಗಿಸಿದ ಅದೇ ಪದವು ಉಪಯೋಗಿಸಲ್ಪಟ್ಟಿದೆ. "ಅಧಿಕಾರವನ್ನು ಕಿತ್ತುಕೋ" ಎಂಬ ಮಾತು ಕೂಡಿಸಲ್ಪಟ್ಟಿದೆ. ಇದು authenteoಎಂಬ ಗ್ರೀಕ್ ಪದದಿಂದ ಭಾಷಾಂತರಿಸಲ್ಪಟ್ಟಿದೆ ಮತ್ತು "ಮೇಲೆ ಅಧಿಕಾರವು ಇರಲಿ" ಇಲ್ಲವೇ ಅಧಿಕಾರವನ್ನು ಚಲಾಯಿಸು ಎಂದು ಅರ್ಥಕೊಡುತ್ತದೆ (see NASB, NIV). ಇದು ಸಾಮಾನ್ಯವಾಗಿ ಇನ್ನೊಬ್ಬನ ಮೇಲೆ ಅಧಿಕಾರವನ್ನು ತೋರಿಸುತ್ತದೆ ಮತ್ತು KJV ಸೂಚಿಸುವಂತೆ "ಕಿತ್ತು ಕೊಂಡ" ಅಧಿಕಾರವನ್ನು ತೋರಿಸುವದಿಲ್ಲ. (ಒಬ್ಬ ಮಹಿಳೆ ಯು ಹಿರಿಯರು ಹಾಗೆ ಮಾಡಬೇಕೆಂದು "ಅಧಿಕಾರ" ಕೊಡಲು ಪ್ರಯತ್ನಿಸಿದರೂ ಪ್ರಸಂಗ ಮಾಡಲಾರಳು ಒಬ್ಬ ಪ್ರಸಂಗಿಯು "ಎಲ್ಲಾ ಅಧಿಕಾರದೊಂದಿಗೆ" ಮಾತಾಡಬೇ ಕಾಗಿರುವದರಿಂದ [ತೀತ 2:15], ಒಬ್ಬ ಮಹಿಳೆಯು ಆ ಸ್ಥಾನವನ್ನು ತುಂಬಲಾರಳು.) ಒಂದು ಸಾಮಾನ್ಯ ಅನ್ವಯ ಮಾಡಲು, ಸಭೆಯ ಹಿನ್ನೆಲೆಯಲ್ಲಿ ಮಾತನಾಡಲಿಕ್ಕೆ ಮಹಿಳೆ ಯರಿಗೆ ಅಪ್ಪಣೆ ಕೊಡಲ್ಪಟ್ಟಿದ್ದಾಗ್ಯೂ, ಅವರು ಇನ್ನೂ ಕೆಲವೊಂದು ಗೌರವವನ್ನು ತೋರಿಸ ಬೇಕಾಗುತ್ತದೆ.

ಪೌಲನು ತನ್ನ ದಿನದ ಪದ್ಧತಿಗಳ ಮೇಲೆ ಕೇವಲ ಪ್ರತಿಬಿಂಬಿಸುತ್ತಿರುವದಿಲ್ಲ ಎಂಬುದನ್ನು ಗಮನಿಸಿರಿ. ಅವನು ತನ್ನ ದಿನದ ಸಾಂಪ್ರದಾಯಗಳಿಗೆ ಮನವಿ ಮಾಡಿಕೊಳ್ಳಲಿಲ್ಲ; ಆದರೆ ಆದಿಕಾಂಡ ಗ್ರಂಥದ ಮೊದಲ ಅಧ್ಯಾಯಗಳಿಗೆ ಮತ್ತು ಎಲ್ಲಾ ಕಾಲಕ್ಕಾಗಿ ದೇವರು ಮಾಡಿದ ವ್ಯವಸ್ಥೆಗಳಿಗೆ ಹಿಂದಿರುಗಿ ಹೋದನು.

ಒಂದು ವ್ಯವಹಾರಿಕ ಸಂಗತಿಯನ್ನು ಸಂಕ್ಷೇಪವಾಗಿ ವಿಚಾರಿಸೋಣ. ಮಹಿಳೆ ಯರು ನಿರ್ದಿಷ್ಟವಾಗಿ ಬಹಿರಂಗ ಆರಾಧನೆಯಲ್ಲಿ ನಡಿಸುವವರಾಗಿರಬಾರದು ಮತ್ತು ಅವರು ಸಾಮಾನ್ಯವಾಗಿ ಪುರುಷರ ಮೇಲೆ ಅಧಿಕಾರ ಚಲಾಯಿಸುವವರಾಗಿರ ಬಾರದು (1 ಕೊರಿಂಥ 11:2-16). ಇನ್ನೊಂದೆಡೆಯಲ್ಲಿ ಮಹಿಳೆಯರು ಹೆಚ್ಚು ಪ್ರತ್ಯೇಕವಾದ ಹಿನ್ನೆಲೆಗಳಲ್ಲಿ ತಮ್ಮ ವರಗಳನ್ನು ಇಲ್ಲವೇ ತಲಾಂತುಗಳನ್ನು ಉಪಯೋಗಿಸಿದರು (ಪ್ರಿಸ್ಕಿಲ್ಲಳೂ. ಅಪೊಸ್ತಲರ ಕೃತ್ಯಗಳು 18:24-26; ಫಿಲಿಪ್ಪನ ಹೆಣ್ಣು ಮಕ್ಕಳು, ಅಪೊಸ್ತಲರ ಕೃತ್ಯಗಳು 21:8, 9). ಈ ಪ್ರಶ್ನೆಯಿರುತ್ತದೆ: "ಬಹಿರಂಗ ಆರಾಧನೆಗಳು ಹಾಗೂ ಪ್ರತ್ಯೇಕ ಪರಿಸ್ಥಿತಿಗಳ ಮಧ್ಯದಲ್ಲಿಯ ಎಲ್ಲಾ ಪರಿಸ್ಥಿತಿಗಳಲ್ಲಿ ಮಹಿಳೆಯರು ಹೇಗೆ ನಡೆದುಕೊಳ್ಳಬೇಕು?" ಇಲ್ಲಿ ಸಾಮಾನ್ಯ ವಾದ ತತ್ವವಿದೆ: "ಆರಾಧನೆಯ" ಹಿನ್ನೆಲೆಗೆ ಅವರು ಹೆಚ್ಚು ಸಮೀಪವಿದ್ದಂತೆ, ಅವರು ಹೆಚ್ಚು ಮೌನತೆಯನ್ನು ಕಾಪಾಡಿಕೊಳ್ಳಬೇಕು. "ಪ್ರತ್ಯೇಕವಾದ" ಹಿನ್ನೆಲೆಗೆ ಅವು ಸಮೀಪವಾಗಿರು ವಾಗ, ಮಾತಾಡುವದಕ್ಕೆ ಹೆಚ್ಚು ಸರಿಯಾದದ್ದಾಗಿರುತ್ತದೆ. ಈ ತತ್ವವು ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವದಿಲ್ಲ, ಆದರೆ ಅದು ಪ್ರಾರಂಭಿಸುವ ಹಂತ ವಾಗಿರುತ್ತದೆ.

ಮೂಲ ವಾಕ್ಯಭಾಗಗಳನ್ನು ನಾವು ಬಿಡುವ ಮೊದಲು, "ಡಿಕನೆಸ್ಸಗಳ" ಬಗ್ಗೆ (ಮಹಿಳಾ ಡೀಕನರು) ಕೆಲವರಿಗೆ ಇರುವ ಸಮಸ್ಯೆಗೆ ಉತ್ತರಕೊಡೋಣ (ರೋಮಾ ಪುರ 16:1, 2). ಡೀಕನೆಸ್ ಹುದ್ದೆ ಎಂದು ಕರೆಯಲ್ಪಡುವ ಒಂದು ಹುದ್ದೆಯು ಆದಿ ಸಭೆಯಲ್ಲಿ ಇತ್ತೆಂಬುದಕ್ಕೆ ಪುರಾವೆಯಿರುವದಿಲ್ಲ. ನಾನು ತಿಳಿದಿರುವಂತೆ, ರೋಮಾಪುರ 16ರಲ್ಲಿ ಮಾತ್ರ "ಡೀಕನ್" ಎಂಬುದರ ಸ್ತ್ರೀಲಿಂಗ ರೂಪವು ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಲ್ಪಟ್ಟಿದೆ.

ಮಹಿಳಾ ಡೀಕನರಿಗೆ ಹಿರಿಯರು ಮತ್ತು ಡೀಕನರಿಗೆ ಇದ್ದಂತೆ ಯಾವುದೇ ಅರ್ಹತೆಗಳು ಕೊಡಲ್ಪಟ್ಟಿರುವದಿಲ್ಲ.

ಹೊಸ ಒಡಂಬಡಿಕೆಯಲ್ಲಿ ಅನೇಕ ಪದಗಳು ಸಾಮಾನ್ಯವಾಗಿ ಇಲ್ಲವೇ ವಿಶೇಷವಾದ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿರಬಹುದಾಗಿದೆ: "ಸಭೆ," "ಹಿರಿಯ," "ಯೇಸು" ಇತ್ಯಾದಿ "ಡೀಕನ್" ಎಂಬ ಪದವು ಒಂದು ಸಾಮಾನ್ಯ ಅರ್ಥದಲ್ಲಿ "ಸೇವಕ" ಇಲ್ಲವೇ "ಮಿನಿಸ್ಟರ್" ಎಂದರ್ಥ ಕೊಡುತ್ತದೆ. ಈ ಸಾಮಾನ್ಯ ಅರ್ಥದಲ್ಲಿ, ಇದ್ದು ಪ್ರಸಂಗಿಗಳಿಗೆ ಮತ್ತು ಎಲ್ಲಾ ಕ್ರೈಸ್ತರಿಗೆ ಅನ್ವಯಿಸಲ್ಪಟ್ಟಿದೆ. "ಡೀಕನೆಸ್" ಎಂಬುದರ ಅಕ್ಷರಶಃ ಅರ್ಥ "ಮಹಿಳಾ ಸೇವಕಿ" ಸಾಮಾನ್ಯ ಅರ್ಥದಲ್ಲಿ, ಸಭೆಯಲ್ಲಿ ಸಂಬಳ ಪಡೆಯುವ ಮತ್ತು ಸಂಬಳಪಡೆಯದ "ಮಹಿಳಾ ಡೀಕನರ" ಸಮೂಹವೇ ಇರುತ್ತದೆ: ಬೈಬಲ್ ಕ್ಲಾಸ್ ಟೀಚರ್ಸ್ ಸಭೆಯ ಕಾರ್ಯದರ್ಶಿಗಳು, ಅಸ್ವಸ್ಥತೆಯಲ್ಲಿರುವವರಿಗೆ ಆಹಾರ ತೆಗೆದು ಕೊಂಡುಹೋಗುವವರು ಇತ್ಯಾದಿ.

## ಒಂದು ಪರಿಶುದ್ಧ ಬರಹದ ಸಮತೋಲನವನ್ನು ಕಂಡು ಕೊಳ್ಳುವದರ ಮೇಲೆ ಕೆಲವು ಸಲಹೆಗಳು

1. *ಈ ವಿಷಯದ ಮೇಲೆ ಬೈಬಲ್ ಹೇಳುವದನ್ನು ಬೋಧಿಸೋಣ.*

2. *ನಮ್ಮ ಪುರುಷರಿಗೆ ನಡಿಸಲು ಬೋಧಿಸೋಣ.* ನಮ್ಮ ಅತಿ ದೊಡ್ಡ ಸಮಸ್ಯೆಯು ಪುರುಷರು ತಾವು ತೆಗೆದು ಕೊಳ್ಳಬೇಕಾದಷ್ಟು ನಡಿಸುವದನ್ನು ತೆಗೆದು ಕೊಳ್ಳಲಾರದಷ್ಟು ಸ್ತ್ರೀಯರು ತೆಗೆದು ಕೊಳ್ಳುವದನ್ನು ಬಯಸದಿರುವಷ್ಟು ಆಗಿರುವದಿಲ್ಲ ಎಂದು ಯಾರೋ ಒಬ್ಬರು ಹೇಳಿದ್ದಾರೆ.

3. *ನಮ್ಮ ಮಹಿಳೆಯರ ತರಬೇತಿಯನ್ನು ಎಂದಿಗೂ ಕಡೆಗಣಿಸದಿರೋಣ.* ಅವರು ಪ್ರಾರ್ಥಿಸಲು, ಬೋಧಿಸಲು ಇತ್ಯಾದಿಗಾಗಿ ಶಕ್ತರಾಗುವ ಅಗತ್ಯತೆಯಿದೆ. ಅವರು ತಮ್ಮ ತಲಾಂತುಗಳ ಒಳ್ಳೆಯ ಮನೆವಾರ್ತೆಯವರು ಆಗಿರುವುದು ಹೇಗೆ ಎಂಬುದನ್ನು ಕಲಿಯುವ ಅಗತ್ಯತೆಯಿದೆ. ಈ ತರಬೇತಿಯಲ್ಲಿ ಮನೆಯ ನಾಯಕತ್ವವಹಿಸಬೇಕು. ಸಬೆಯಲ್ಲಿಯ ಭಕ್ತಿಯುಳ್ಳ ಮಹಿಳೆಯರು ಈ ತರಬೇತಿಗೆ ಸಹಾಯ ಮಾಡಬಹುದು (ತೀತ 2).

4. *ನಾವು ಗಮನಿಸಿದ ಬೈಬಲಿನ ಮೂಲ ತತ್ವಗಳನ್ನು ಮೀರದೇ ಮಹಿಳೆಯರ ಪ್ರತಿಯೊಂದು ಕಾನೂನು ಬದ್ಧ ವರಗಳನ್ನು ಹೇಗೆ ಉಪಯೋಗಿಸಬೇಕು ಎಂಬುದರ ಬಗ್ಗೆ ಗಂಭೀರವಾಗಿ ವಿಚಾರಿಸೋಣ.* ಸಭೆಯ ಅಗತ್ಯತೆಗಳನ್ನು ಕುರಿತ ಮಹಿಳೆಯರ ಕೊಡುಗೆಗಳು ನಮಗೆ ಅಗತ್ಯವಾಗಿವೆ. ನಮಗೆ ಮಹಿಳೆಯರ ತಲಾಂತುಗಳ ಅಗತ್ಯತೆ ಇದೆ. ನಾನು ತಿಳಿದ ಹೆಚ್ಚಾದ ಸಭೆಗಳು ಮಹಿಳೆಯರು ಮಾಡುವ ಕೆಲಸವಿಲ್ಲದೆ ಕಾರ್ಯಸಾಧಿಸಲಾರವು!

## ಮುಕ್ತಾಯ

ಬರುವ ವರ್ಷಗಳಲ್ಲಿ ಅನೇಕ ಆಹ್ವಾನಗಳು ಬರುವವು. ಲೋಕಕ್ಕೆ ಹೊಂದಿಕೊಂಡು ಹೋಗುವಂತೆ ಸಭೆಯ ಮೇಲೆ ಒತ್ತಡಗಳು ಹಾಕಲ್ಪಡುವವು. ನಮ್ಮ ಬೋಧನೆಗಳಲ್ಲಿ ಮತ್ತು ಆಚರಣೆಗಳಲ್ಲಿ ನಾವು ಬೈಬಲಿಗೆ ತಕ್ಕಂತೆ ಉಳಿಯಲು ದೇವರು ನಮಗೆ ಸಹಾಯ ಮಾಡಲಿ. ದೇವರು ತನ್ನ ಸಭೆಯೊಂದಿಗಿರಲಿ!

---

ಟಿಪ್ಪಣಿ

[1]ಬೇರೆ ಕಡೆಯಲ್ಲಿ ವ್ಯತಿರಿಕ್ತವಾಗಿರುವ ಸಾಮಾನ್ಯ ನಿರ್ದೇಶನಗಳನ್ನು ಮೇಲಿಂದ ಮೇಲೆ ಬೈಬಲ್ ಕೊಡುತ್ತದೆ. ಉದಾಹರಣೆಗಾಗಿ, ದೇಶದ ಕಾನೂನುಗಳಿಗೆ ನಾವು ವಿಧೇಯರಾಗಬೇಕು (ರೋಮಾಪುರ

13), ಆದರೆ ಇನ್ನು ಮುಂದೆ ಪ್ರಸಂಗಿಸಬಾರದೆಂದು ಪೇತ್ರನು ಆಜ್ಞಾಪಿಸಲ್ಪಪಟ್ಟಾಗ, ಅವನು, "ಮನುಷ್ಯರಿಗಿಂತಲೂ ದೇವರಿಗೆ ಹೆಚ್ಚಾಗಿ ವಿಧೇಯರಾಗಬೇಕಲ್ಲಾ" (ಅಪೊಸ್ತಲರ ಕೃತ್ಯಗಳು 5:29) ಎಂದು ಹೇಳಿದನು. ಅಲ್ಲಿ ವಿರೋಧಾಭಾಸವಿರುವುದೋ? ಇಲ್ಲ. "ದೇಶದ ನಿಯಮಗಳಿಗೆ ವಿಧೇಯರಾಗಿರಿ" ಎಂಬ ನಿಯಮವಿದೆ. ಆಕ್ಷೇಪಣೆಯು "... ಆ ನಿಯಮಗಳು ದೇವರ ನಿಯಮವನ್ನು ಉಲ್ಲಂಘಿಸುವಾಗ 1 ಕೊರಿಂಥ 14ರಲ್ಲಿ ನಮಗೆ ಒಂದು ಸಾಮಾನ್ಯ ತತ್ವವಿದೆ. ಆರಾಧನೆಯ ಕೂಟದಲ್ಲಿ ಸ್ತ್ರೀಯರು ಮೌನವಾಗಿರತಕ್ಕದ್ದು. ಹಾಡುವದರ ಮೇಲಿನ ವಾಕ್ಯಭಾಗಗಳು ಅಪವಾದಾತ್ಮಕವಾವುಗಳಾಗಿವೆ: ಎಲ್ಲಾ ಕ್ರೈಸ್ತರಿಗೆ ಹಾಡುವದಕ್ಕೆ ಆಜ್ಞಾಪಿಸಲ್ಪಟ್ಟಿದ್ದಾರೆ" (ಕೊಲೊಸ್ಸೆ 13:16). ಇತರರ ಮುಂದೆ ಅರಿಕೆ ಮಾಡುವುದರ ಬಗೆಗಿನ ವಾಕ್ಯಭಾಗಗಳು ಅಪವಾದಾತ್ಮಕವನ್ನು ಕೊಡುತ್ತದೆ; ಎಲ್ಲರೂ ಅದನ್ನು ಮಾಡಬೇಕು (ರೋಮಾ ಪುರ 10:9, 10; 1 ತಿಮೊಥೆ 6:12; ಮತ್ತಾಯ 10:32).